ಪ್ರಜೆಗಳಿಂದ ಆರಿಸಿ ಬಂದಿರುವುದು. (xxx) ಎಂದು ಹೇಳುವುದೇ ಮಹಾತಪ್ಪೇ? ನಾನು (xxx) ಎಂದು ಹೇಳಬೇಕೇನು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಒಂದು ತಿಂಗಳ ಕಾಲಾವಕಾಶ ಬೇಕು. ಒಂದು ತಿಂಗಳೊಳಗೆ ತರಿಸಿಕೊಡುತ್ತೇನೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ:– ಉನ್ನತ ಶಿಕ್ಷಣ ಸಚಿವರಿಲ್ಲವೇ? ಅವರು ಉತ್ತಮವಾಗಿ ಕೆಲಸ ಮಾಡುತ್ತಿಲ್ಲವೇ? ಈ ಇಲಾಖೆಯಲ್ಲಿ ಕೆಲಸವೇ ಆಗುತ್ತಿಲ್ಲ. ಏನು ಕೆಲಸ ಆಗುತ್ತಿದೆ? ಬೇರೆಯವನ್ನು ಟೀಕೆ ಮಾಡುವುದೇ?

ಉಪಾಧ್ಯಕ್ಷರು:– ಮಾನ್ಯ ಸಚಿವರೇ, ಈಗ ಕಂಪ್ಯೂಟರ್ ಯುಗ ನಡೆಯುತ್ತಿದೆ. ಮಾಹಿತಿ ತೆಗೆದುಕೊಳ್ಳುವುದಕ್ಕೆ ವಿಶೇಷ ಕಷ್ಟ ಇಲ್ಲ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ:– ಇಲ್ಲ ಎಂದರೆ ನಾನು ಸಭಾತ್ಯಾಗ ಮಾಡಲೇ?

ಉಪಾಧ್ಯಕ್ಷರು:– 10ನೇ ತಾರೀಖಿನೊಳಗೆ, ಅಧಿವೇಶನ ಮುಗಿಯುವುದರೊಳಗೆ ತಾವು ಉತ್ತರ ಕೊಡುವಂಥ ವ್ಯವಸ್ಥೆ ಮಾಡಬೇಕು. ನಾನು ಸೂಚನೆ ಕೊಡುತ್ತಿದ್ದೇನೆ. ನೀವು ಕುಳಿತುಕೊಳ್ಳಿ.

ಉದ್ಯೋಗ ಖಾತರಿ ಯೋಜನೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 23 (442)
ಸದಸ್ಯರ ಹೆಸರು : ಶ್ರೀ ಗೂಳಿಹಟ್ಟಿ.ಡಿ.ಶೇಖರ (ಹೊಸದುರ್ಗ)
ಉತ್ತರಿಸುವ ಸಚಿವರು : ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಪ್ರಶ್ನೆಗಳು:

ಅ) ಚಿತ್ರದುರ್ಗ ಜಿಲ್ಲೆಯಲ್ಲಿ ಉದ್ಯೋಗ ಖಾತ್ರಿ ಯೋಜನೆಗೆ ಬಿಡುಗಡೆಯಾದ ಅನುದಾನವೆಷ್ಟು? (ವಿವರ ಒದಗಿಸುವುದು)

ಆ) ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕಿಗೆ ಉದ್ಯೋಗ ಖಾತ್ರಿ

ಯೋಜನೆಯಡಿ ಮಂಜೂರಾದ ಅನುದಾನವೆಷ್ಟು, ಕಾಮಗಾರಿಗಳು ವಿಳಂಬವಾಗಲು ಕಾರಣಗಳೇನು? (ಕಾಮಗಾರಿ ವಿವರ ನೀಡುವುದು)

ಇ) ಹೊಸದುರ್ಗ ತಾಲ್ಲೂಕಿಗೆ ಕುಡಿಯುವ ನೀರಿನ ಯೋಜನೆಗಳಿಗೆ ಬಿಡುಗಡೆಯಾದ ಅನುದಾವೆಷ್ಟು? (ಕಾಮಗಾರಿಗಳ ಸಹಿತ ವಿವರ ನೀಡುವುದು)

ಉತ್ತರಗಳು:

ಅ) ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ಚಿತ್ರದುರ್ಗ ಜಿಲ್ಲೆಗೆ ಪ್ರಸಕ್ತ ಸಾಲಿನಲ್ಲಿ ರೂ. 12603.00 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದೆ.

ಆ) ಪ್ರಸಕ್ತ ಸಾಲಿನಲ್ಲಿ ಹೊಸದುರ್ಗ ತಾಲ್ಲೂಕಿಗೆ ಸದರಿ ಯೋಜನೆಯಡಿ ರೂ. 3240.00ಲಕ್ಷಗಳ ಅನುದಾನವು ಮಂಜೂರು ಆಗಿರುತ್ತದೆ. ಹೊಸದುರ್ಗ ತಾಲ್ಲೂಕಿನಲ್ಲಿ ಕೃಷಿ ಚಟುವಟಿಕೆಗಳು ಇರುವ ಪ್ರಯುಕ್ತ ಪ್ರಗತಿಯು ಕುಂಟಿತವಾಗಿರುತ್ತದೆ. ಹೊಸದುರ್ಗ ತಾಲ್ಲೂಕು ಒಳಗೊಂಡಂತೆ ಜಿಲ್ಲೆಯ ಎಲ್ಲಾ ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶವೆಂದು ಸರ್ಕಾರವು ಘೋಷಿಸಿರುವುದರಿಂದ ಯಾವುದೇ ಕೂಲಿಕಾರರು ಬೇರೆ ಕಡೆಗೆ ಗೂಳೆ ಹೋಗಬಾರದೆಂದು ಸದುದ್ದೇಶದಿಂದ ಗ್ರಾಮ ಪಂಚಾಯಿತಿಗಳಲ್ಲಿ ಟಾಂಟಾಂ ಮತ್ತು ಕರಪತ್ರಗಳ ಮೂಲಕ ವ್ಯಾಪಕ ಪ್ರಚಾರವನ್ನು ನೀಡಲಾಗಿದೆ. ಹಾಗೂ ಸ್ಥಳೀಯ ಮತ್ತು ರಾಜ್ಯ ಮಟ್ಟದ ದಿನಪತ್ರಿಕೆಗಳಲ್ಲಿ ಜಾಹೀರಾತು ನೀಡಲಾಗಿರುತ್ತದೆ. ಮತ್ತು ಆಕಾಶವಾಣಿ ಮುಖಾಂತರ ಸಹ ಪ್ರಚಾರ ಪಡಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಲಾಗುವುದು.

ಇ) 2011–12 ಸಾಲಿನ ಹೊಸದುರ್ಗ ತಾಲ್ಲೂಕು ವ್ಯಾಪ್ತಿಯಲ್ಲಿ ರಾಷ್ಟ್ರೀಯ ಕುಡಿಯುವ ನೀರು ಯೋಜನೆಯಡಿ ಒಟ್ಟು 130 ಕಾಮಗಾರಿಗಳು ಅನುಮೋದನೆಯಾಗಿದ್ದು, ರೂ. 835.93 ಲಕ್ಷಗಳು

ನಿಗದಿಯಾಗಿರುತ್ತದೆ. ಸದರಿ ಅನುದಾನದಲ್ಲಿ ಈವರೆಗೆ ರೂ. 534.71 ಲಕ್ಷಗಳು ವೆಚ್ಚವಾಗಿದ್ದು, 89 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಉಳಿದ ಕಾಮಗಾರಿಗಳನ್ನು ಮಾರ್ಚ್–2012ರ ಅಂತ್ಯದೊಳಗೆ ಪೂರ್ಣಗೊಳಿಸಿ ಎಲ್ಲಾ ಅನುದಾನವನ್ನು ಬಳಸಿಕೊಳ್ಳಲಾಗುವುದು. ಕಾಮಗಾರಿಗಳ ಪಟ್ಟಿ ಅನುಬಂಧ–1ರಲ್ಲಿ ಲಗತ್ತಿಸಿದೆ.

ಕಾಮಗಾರಿಗಳ ಪಟ್ಟಿ

ANNEXURE-I

2011–12ನೇ ಸಾಲಿನ ಹೊಸದುರ್ಗ ತಾಲ್ಲೂಕಿನ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿಗಳ ಆರ್ಥಿಕ ಮತ್ತು ಭೌತಿಕ ಪ್ರಗತಿಯ ವರದಿ

ಪಂ.ರಾಜ್, ಇಂ. ಉಪ ವಿಭಾಗದ ಹೆಸರು : ಹೊಸದುರ್ಗ

ತಾಲ್ಲೂಕು ಹೆಸರು : ಹೊಸದುರ್ಗ

ಕ್ರ ಸಂ.	ಕ್ರಿಯಾ ಯೋಜನೆ ಸಂಖ್ಯೆ	ಕಾಮಗಾರಿಗಳ ವಿವರ	ಯೋಜನೆಯ ಹೆಸರು	ಏಜೆನ್ಸಿ/ ಗುತ್ತಿಗೆದಾರರ ಹೆಸರು	ಅಂದಾಜು ಮೊತ್ತ	2010–11ನೇ ಸಾಲಿಗೆ ಭರಿಸಿದ ವೆಚ್ಚ	2011–12ನೇ ಸಾಲಿನ ವೆಚ್ಚ	ಒಟ್ಟು ವೆಚ್ಚ (ಇಂದಿನ ತನಕ)	ಕಾಮಗಾರಿಯ ಇಂದಿನ ವಾಸ್ತವ ಸ್ಥಿತಿ
1	2	3	4	5	6	7	8	9	10
COVERAGE & QUALITY SPILL OVER WORKS									
1.	794	ANIVALA	PWS REVIVAL	ಎಸ್.ವಿ.ಸೈಯದ್ ಬಾಬು	1000000	600600	169956	770556	Work Completed
2.	795	HALLEKUNDUR	PWSS	ಪಿ. ಆಂಜನಪ್ಪ	1500000	1403805	76535	1480340	Work Completed
3.	796	ATHIMAGGE	MMS REVIVAL	ಎಸ್.ಹೆಚ್.ಜಗದೀಶ್	400000	174677	187444	362121	Work Completed
4.	797	ATHIMAGGE BHOVIHATTI	MWS REVIVAL	ಎಸ್.ಹೆಚ್.ಜಗದೀಶ್	500000	271523	210683	482206	Work Completed
5.	798	KORACHARAHATTY	PWS REVIVAL	ಎ.ಎ.ಸುರೇಶ್	1500000	107480	362538	470018	Work Completed
6.	799	RAMAJJANAHALLY	PWSS	ಬಿ.ಎಲ್ ಜ್ಯೋತಿ ಚೌದರಿ	1300000	1138105	0	1138105	Work Completed
7.	800	BAGUR	MWSS	ಎ. ಯತೀಶ್ ಕುಮಾರ್	570000	128245	316735	444961	Work Completed
8.	802	K.T.NAGARA	MWSS	ಬಿ.ಎಸ್. ರಮೇಶ್	280000	276000	0	276000	Work Completed
9.	803	KODIHALLI	MWS REVIVAL	ಎಸ್.ದೇವರಾಜ್	425000	420000	0	420000	Work Completed
10.	804	A.GOLLRAHATTI	MWS REVIVAL	ಎ.ವಿ. ಶಶಿಧರ	400000	107050	214210	321260	Work Completed
11.	805	A.LAMBANIHATTI	MWS REVIVAL	ಎ.ವಿ. ಶಶಿಧರ	400000	107050	208948	315998	Work Completed
12.	806	B.AK.HATTI	MWS REVIVAL	ಬಿ.ಎನ್.ಲಕ್ಷ್ಮೀಪತಿ	300000	107050	148688	253738	Work Completed

ಕ್ರ ಸಂ.	ಕ್ರಿಯಾ ಯೋಜನೆ ಸಂಖ್ಯೆ	ಕಾಮಗಾರಿಗಳ ವಿವರ	ಯೋಜನೆಯ ಹೆಸರು	ಏಜೆನ್ಸಿ/ ಗುತ್ತಿಗೆದಾರರ ಹೆಸರು	ಅಂದಾಜು ಮೊತ್ತ	2010–11ನೇ ಸಾಲಿಗೆ ಭರಿಸಿದ ವೆಚ್ಚ	2011–12ನೇ ಸಾಲಿನ ವೆಚ್ಚ	ಒಟ್ಟು ವೆಚ್ಚ (ಇಂದಿನ ತನಕ)	ಕಾಮಗಾರಿಯ ಇಂದಿನ ವಾಸ್ತವ ಸ್ಥಿತಿ
1	2	3	4	5	6	7	8	9	10
13.	807	BALLALASAMUDRA	PWS REVIVAL	ಬಿ.ಎಲ್ ಜ್ಯೋತಿ ಚೌದರಿ	1000000	0	892325	892325	Work Completed
14.	809	S SIDDARAHATTI	MWSR	ಬಿ.ಎಸ್.ವಿಜಯ್‌ಕುಮಾರ್	400000	399890	0	399890	Work Completed
15.	810	KALKERE	PWS REVIVAL	ಎಸ್.ದೇವರಾಜ್	245000	93187	246943	340130	Work Completed
16.	812	ARALIHALLI	PWSS	ಎಂ.ಹೆಚ್. ಅಂಜಿನಪ್ಪ	500000	209743	289443	499186	Work Completed
17.	814	M.G.DIBBA	PWSS	ಎ.ಯತೀಶ್ ಕುಮಾರ್	1800000	170000	0	170000	Work Completed
18.	815	M.G.DIBBA	MWSR	ಎ.ಯತೀಶ್ ಕುಮಾರ್	660000	100000	66045	166045	Work Completed
19.	816	HONNEKERE	PWSS	ಬಿ.ದಕ್ಷಿಣಮೂರ್ತಿ	423000	420000	0	420000	Work Completed
20.	817	MACHANAHALLI	MWS REVIVAL	ಎಂ.ಆರ್. ಮಂಜುನಾಥ್	400000	152068	247005	399073	Work Completed
21.	818	BYADRAHALLI	MWSS	ಹೆಚ್.ಟಿಕ. ಜಯಣ್ಣ	500000	242937	0	242937	Work Completed
22.	817	CHIKKABYALADAKERE	PWS REVIVAL	ಬಿ.ಎನ್. ಲಕ್ಷ್ಮೀಪತಿ	1500000	1021419	468581	1490000	Work Completed
23.	820	SHIVANAGARA	MWSS	ವಿ.ಎಸ್.ಸ್ವಾಮಿ	280000	156497	13125	169622	Work Completed
24.	821	DODDABYALADAKERE	PWS REVIVAL	ವಿ.ಎಸ್.ಸ್ವಾಮಿ	500000	223500	63180	286680	Work Completed
25.	822	DEVAPURA	PWSR	ಹೆಚ್.ಆರ್.ಕಲ್ಲೇಶಪ್ಪ	976000	419360	109640	529200	Civil work Completed KEB Pending
26.	824	GUTIKATTE	MWS REVIVAL	ಸಿ.ಶ್ರೀಧರ್	340000	184198	172152	356350	Work Completed
27.	825	KALLAHALLI	MWS REVIVAL	ಎಂ.ತಿಮ್ಮಣ್ಣ	500000	52370	427630	480000	Work Completed
28.	826	DODDKITTADAHALLY	PWSS	ಕೆ.ಅಂಜನಮೂರ್ತಿ	1000000	108760	402706	511466	Work Completed
29.	827	NAKIKERE	PWS REVIVAL	ಆರ್. ಜಗದೀಶ್	900000	143435	635135	778570	Work Completed

ಕ್ರ ಸಂ.	ಕ್ರಿಯಾ ಯೋಜನೆ ಸಂಖ್ಯೆ	ಕಾಮಗಾರಿಗಳ ವಿವರ	ಯೋಜನೆಯ ಹೆಸರು	ಏಜೆನ್ಸಿ/ ಗುತ್ತಿಗೆದಾರರ ಹೆಸರು	ಅಂದಾಜು ಮೊತ್ತ	2010–11ನೇ ಸಾಲಿಗೆ ಭರಿಸಿದ ವೆಚ್ಚ	2011–12ನೇ ಸಾಲಿನ ವೆಚ್ಚ	ಒಟ್ಟು ವೆಚ್ಚ (ಇಂದಿನ ತನಕ)	ಕಾಮಗಾರಿಯ ಇಂದಿನ ವಾಸ್ತವ ಸ್ಥಿತಿ
1	2	3	4	5	6	7	8	9	10
30.	828	NAKIKERE	PWSR	ಕೆ.ಅಂಜಿನಮೂರ್ತಿ	400000	123313	267786	391099	Work Completed
31.	829	A.K.HATTY	MWSS	ಕೆ.ಅಂಜಿನಮೂರ್ತಿ	600000	38292	158018	541010	Work Completed
32.	830	SANNAKITTADAHALLY G.HATTY	MWS REVIVAL	ಕೆ.ಅಂಜಿನಮೂರ್ತಿ	450000	249625	158018	407843	Work Completed
33.	833	DODDATHEKALAVATTY	PWS REVIVAL	ಬಿ.ಎನ್.ಲಕ್ಷ್ಮೀಪತಿ	800000	402706	49645	452351	Work Completed
34.	834	D.MALLAPURA	PWSS	ಎಸ್.ವಿ.ಸೈಯದ್ ಬಾಬು	1500000	455243	775757	1251000	Work Completed
35.	835	DODDAGHATTA	COMBINED WATER SUPPLY	-	17800000	0	0	0	Revised estimate tobe submitted
36.	836	G.N.KERE	PWSS	ಹೆಚ್.ಟಿ. ಜಯ್ಯಣ್ಣ	370000	0	255641	255641	Work Completed
37.	837	HOSATHIMMAPPANAHATTI	MWS REVIVAL	ಬಿ.ಎಂ.ಶ್ರೀಧರ್	300000	161351	47145	208496	Work Completed
38.	838	ITTIGEHALLY	PWSS	ಎ.ಎಸ್.ಶ್ರೀಧರ್	200000	116000	0	116000	Work Completed
39.	839	HINDEDEVARAHATTI	MWSS	ಎನ್.ದೇವರಾಜ್	300000	0	211335	211335	Work Completed
40.	840	NAGATHIHALLY	PWSS	ವಿ.ಯತೀಶ್ ಕುಮಾರ್	489000	222000	66045	288045	Civil work completed KEB Pending
41.	841	HEDDALLY	PWSS	ಸಿ. ಶಾಚಿತ್ ಕುಮಾರ್	500000	0	0	0	Under Process
42.	843	GIRMALLAIAHNAPALYA	PWSS	ಬಿ.ಎನ್.ಲಕ್ಷ್ಮೀಪತಿ	1800000		1767295	1787295	Nearing Completion
43.	844	OBLAPURA	PWS REVIVAL	ಕೆ.ಯೋಗಿಶಪ್ಪ	450000	302000	0	302000	Nearing Completion
44.	845	VENGALAPURA	MWSR	ಕೆ.ರಂಗನಾಥ	476000	476000	0	476000	Work Completed
45.	846	BAJAPPANAHATTI	MWSS	ಆರ್.ರುದ್ರೇಶ	300000	125825	233339	359164	Nearing Completion

ಕ್ರ ಸಂ.	ತ್ರಿಯಾ ಯೋಜ ನೆ ಸಂಖ್ಯೆ	ಕಾಮಗಾರಿಗಳ ವಿವರ	ಯೋಜನೆಯ ಹೆಸರು	ಏಜೆನ್ಸಿ/ ಗುತ್ತಿಗೆದಾರರ ಹೆಸರು	ಅಂದಾಜು ಮೊತ್ತ	2010–11ನೇ ಸಾಲಿಗೆ ಭರಿಸಿದ ವೆಚ್ಚ	2011–12ನೇ ಸಾಲಿನ ವೆಚ್ಚ	ಒಟ್ಟು ವೆಚ್ಚ (ಇಂದಿನ ತನಕ)	ಕಾಮಗಾರಿಯ ಇಂದಿನ ವಾಸ್ತವ ಸ್ಥಿತಿ
1	2	3	4	5	6	7	8	9	10
46.	847	GORAVINAKAL	PWS REVIVAL	ಎಸ್.ಮಿಸ್ಬಯದ್ ಬಾಬು	1300000	391451	875284	1266735	Work Completed
47.	848	CHITHAIAHNAHATTI	MWS REVIVAL	ಎಸ್.ರಾಘವೇಂದ್ರ	500000	283640	0	263640	Nearing Completion
48.	849	GOLLARAHATTY	PWSS	ಹೆಚ್.ಆರ್.ನಿರಂಜನ ಮೂರ್ತಿ	1500000	590408	335213	925821	Under Process
49.	850	JODISRIRANGAPURA	MWS REVIVAL	ಯತೀಶ್	600000	258526	0	258526	Work Completed
50.	851	KAPPAGERE	PWS REVIVAL	ಬಿ.ಎಲ್. ಜ್ಯೋತಿ ಚಾಧರಿ	900000		220889	220889	Under Process
51.	852	SIDDHAPPANAHATTI	MWS REVIVAL	ಸಿ.ಎಸ್.ರಮೇಶ್	500000	234457	0	234457	Work Completed
52.	853	HUNASEKATTE	MWSR	ಎಸ್.ದೇವರಾಜ್	400000	157656	0	157656	Work Completed
53.	854	JANKAL	PWS REVIVAL	ಆರ್.ಜಗದೀಶ್	400000	122970	339739	402709	Under Process
54.	855	MUDLABOVIHATTI	MWS REVIVAL	ಬಿ.ಎಂ.ಮಲ್ಲಪ್ಪ	300000	294000	0	294000	Work Completed
55.	856	VEERVANAGATHIHALI	MWSR	ಆರ್.ಜಗದೀಶ್	400000	381000	0	381000	Work Completed
56.	857	HOSAHATTY	MWS REVIVAL	ಮಹಮ್ಮದ್ ದಾದಾಪೀರ್	400000	113000	188105	301105	Nearing Completion
57.	858	KABBLA	MWS REVIVAL	ಎಂ.ಡಿ.ರಾಮೇಗೌಡ	500000	502780	0	502780	Work Completed
58.	859	MALLENAHALLY (JODI)	PWSS	ಎಂ.ಡಿ.ರಾಮೇಗೌಡ	1200000	641303	536697	1180000	Work Completed
59.	861	MATHURU	PWS REVIVAL	ಬಿ.ಎಲ್ ಜ್ಯೋತಿ ಚೌದರಿ	1000000	117247	957332	1074579	Work Completed
60.	862	THONACHANA HALLY	PWSS	ಡಿ.ಬಿ.ಕಂಠಿ	1000000	120000	0	120000	Tender submitted to SE

ಕ್ರ. ಸಂ.	ಕ್ರಿಯಾ ಯೋಜನೆ ಸಂಖ್ಯೆ	ಕಾಮಗಾರಿಗಳ ವಿವರ	ಯೋಜನೆಯ ಹೆಸರು	ಏಜೆನ್ಸಿ/ ಗುತ್ತಿಗೆದಾರರ ಹೆಸರು	ಅಂದಾಜು ಮೊತ್ತ	2010–11ನೇ ಸಾಲಿಗೆ ಭರಿಸಿದ ವೆಚ್ಚ	2011–12ನೇ ಸಾಲಿನ ವೆಚ್ಚ	ಒಟ್ಟು ವೆಚ್ಚ (ಇಂದಿನ ತನಕ)	ಕಾಮಗಾರಿಯ ಇಂದಿನ ವಾಸ್ತವ ಸ್ಥಿತಿ
1	2	3	4	5	6	7	8	9	10
61.	863	H.BOVIHATTY	MWSS	ಹೆಚ್.ಆರ್.ಮಹಮ್ಮದ್ ಇಕ್ಬಾಲ್	400000	399966	0	399965	Work Completed
62.	864	HARLAHALLY	PWS AUGMENTATION	ಡಿ.ಬಿ.ಕಂಠಿ	1500000	684269	803872	1488141	Work Completed
63.	865	MALAPPANAHALLY	MWSS AUGMENTATION	ಕೆ.ಯೋಗೇಶ್ವರಪ್ಪ	400000	380000	0	380000	Work Completed
64.	866	MENGASANDRA	MWSS AUGMENTATION	ಜೆ.ಎಸ್.ರಮೇಶ್	500000	0	380000	380000	Work Completed
65.	867	BALENAHALLY	MWS REVIVAL	ಎ.ಎನ್.ಶ್ರೀಧರ್	300000	200000	114948	314948	Nearing Completion
66.	868	KANCHIPURA	PWS REVIVAL	ಬಿ.ಎನ್. ಲಕ್ಷ್ಮೀಪತಿ	300000	325115	0	325115	Work Completed
67.	869	GANJIGERE	MWS REVIVAL	ಬಿ.ಎಲ್ ಜ್ಯೋತಿ ಚೌದರಿ	300000	120000	103371	223371	Work Completed
68.	870	KAEHALLI	PWS REVIVAL	ಬಿ.ಆರ್.ರಾಮಲಿಂಗಪ್ಪ	500000	250000	22821	272821	Work Completed
69.	872	KARALAMOVINAHALLI	MWS REVIVAL	ಬಿ.ಎಸ್.ವಿಜಯ್‌ಕುಮಾರ್	300000	280000	0	280000	Work Completed
70.	875	KELLODU	PWSS	ಎಸ್.ವಿ.ಸೈಯದ್ ಬಾಬು	998000	889440	56943	956383	Work Completed
71.	876	KYADUGERE	MWSS	ಬಿ.ದಕ್ಷಿಣಮೂರ್ತಿ	300000	299961	57948	357909	Work Completed
72.	877	LINGADAHALLI	PWSS	ಪಿ.ಅಂಜನಪ್ಪ	1500000	673811	753918	1427729	Work Completed
73.	880	MUTHAGONADHI	MWS REVIVAL	ಬಿ.ಎಸ್.ವಿಜಯ್‌ಕುಮಾರ್	400000	350623	0	350623	Work Completed
74.	881	BHAGASHETTIHALLI	PWSS	ಬಿ.ಎಸ್.ಶಿವಲಿಂಗಪ್ಪ	800000	399550	266305	665855	Work Completed
75.	882	KADADANAKERE BOVIHATTI	MWSS	ಎಸ್.ರಾಘವೇಂದ್ರ	400000	110993	103095	214088	Nearing Completion
76.	883	KONDAJI L HATTI	PWSS	ಬಿ.ದಕ್ಷಿಣಮೂರ್ತಿ	1450000	0	1395346	1395346	Work Completed
77.	884	KOGAVALLI	PWSS	ವಿ.ಯತೀಶ್ ಕುಮಾರ್	500000	198749	172179	370928	Work Completed

ಕ್ರ ಸಂ.	ತ್ರಯಾ ಯೋಜನೆ ಸಂಖ್ಯೆ	ಕಾಮಗಾರಿಗಳ ವಿವರ	ಯೋಜನೆಯ ಹೆಸರು	ಏಜೆನ್ಸಿ/ ಗುತ್ತಿಗೆದಾರರ ಹೆಸರು	ಅಂದಾಜು ಮೊತ್ತ	2010–11ನೇ ಸಾಲಿಗೆ ಭರಿಸಿದ ವೆಚ್ಚ	2011–12ನೇ ಸಾಲಿನ ವೆಚ್ಚ	ಒಟ್ಟು ವೆಚ್ಚ (ಇಂದಿನ ತನಕ)	ಕಾಮಗಾರಿಯ ಇಂದಿನ ವಾಸ್ತವ ಸ್ಥಿತಿ
1	2	3	4	5	6	7	8	9	10
78.	885	KONGAVALLI KURUBARA HALLY	PWSS	ಜೆ.ಆರ್.ಕೇಶವಮೂರ್ತಿ	1000000	93478	243522	337000	Under Process
79.	886	KORATIKERE	PWSS	ಹೆಚ್.ಆರ್.ನಿರಂಜನ ಮೂರ್ತಿ	1000000	0	180328	180328	Under Process
80.	887	MALALI	PWSS	ವಿ.ಯತೀಶ್ ಕುಮಾರ್	900000	140000	301337	441337	Under Process
81.	888	GAVIRANGAPURA	MWSS AGUMENTATION	ಮಹಮ್ಮದ್ ನಸುರುಲ್ಲಾ	400000	281925	118075	400000	Work Completed
82.	889	SOMENAHALLI	PWSS	ಕೆ.ಎಸ್.ನಟರಾಜ್	12500000	330142	532858	863000	Work Completed
83.	891	SUDUGADANA PALYA	MWS REVIVAL	ಎ.ವಿ.ಶಶಿಧರ	490000	310000	0	310000	Work Completed
84.	892	SUJIKAL	PWS AGUMENTATION	ಎಂ.ಡಿರಾಮೇಗೌಡ	700000	675000	0	575000	Work Completed
85.	894	NAGAINATTY	MWSS	ಮಹಮ್ಮದ್ ದಾದಾಪೀರ್	400000	0	61202	61202	Work Completed
86.	895	THIMMAIAHNAHATTI	MWS REVIVAL	-	150000	0	0	0	Under Process
87.	897	MADADAKERE	PWS REVIVAL	ಬಿ.ಎನ್. ಲಕ್ಷ್ಮೀಪತಿ	1000000	177358	0	177358	Under Process
88.	898	BOVIHATTY	MWSS	ಆರ್. ಜಗದೀಶ್	450000	235408	0	235408	Work Completed
89.	899	AREHALLI	PWS REVIVAL	ಹೆಚ್.ಟಿ.ಜಯಣ್ಣ	450000	180000	127865	307865	Work Completed
90.	900	KAPPANAKANAHALLY	MWS REVIVAL	ಎಲ್.ಎಂ.ಭೈರಪ್ಪ	300000	182845	291607	474452	Work Completed
91.	904	SHANTHAPPANAPALYA	MWSS	ಬಿ.ಆರ್.ರಾಮಲಿಂಗಪ್ಪ	400000	268000	112671	380671	Civil work completed KEB Pending
92.	905	CHIKKAHULLEHALE NAHALLY	MWSS	ಮಯಹಮ್ಮದ್ ನಸರುಲ್ಲಾ	450000	449520	0	449520	Work Completed
93.	908	SYEDSABPALYA	PWSS	ಎಸ್.ವಿ.ಸೈಯದ್ ಬಾಬು	1500000	442499	900370	1342869	Work Completed
94.	909	S NERLAKERE	MWSS AGUMENTATION	ಬಿ.ಎಸ್.ರಮೇಶ್	650000	71831	558169	630000	Work Completed

ಕ್ರ ಸಂ.	ಕ್ರಿಯಾ ಯೋಜನೆ ಸಂಖ್ಯೆ	ಕಾಮಗಾರಿಗಳ ವಿವರ	ಯೋಜನೆಯ ಹೆಸರು	ಏಜೆನ್ಸಿ/ ಗುತ್ತಿಗೆದಾರರ ಹೆಸರು	ಅಂದಾಜು ಮೊತ್ತ	2010–11ನೇ ಸಾಲಿಗೆ ಭರಿಸಿದ ವೆಚ್ಚ	2011–12ನೇ ಸಾಲಿನ ವೆಚ್ಚ	ಒಟ್ಟು ವೆಚ್ಚ (ಇಂದಿನ ತನಕ)	ಕಾಮಗಾರಿಯ ಇಂದಿನ ವಾಸ್ತವ ಸ್ಥಿತಿ
1	2	3	4	5	6	7	8	9	10
95.	911	AHMEDNAGARA	PWSS	ಡಿ.ಬಿ.ಕಂಠಿ	500000	365274	51325	416599	Work Completed
96.	912	HURLIHALLI	MWS REVIVAL	ಕೆ.ಯೋಗೇಶಪ್ಪ	500000	0	445060	445060	Work Completed
97.	913	NERAGUNDHA	MWS REVIVAL	ಎಸ್.ವಿ.ಶೇಖರಪ್ಪ	400000	393133	0	393133	Work Completed
98.	914	PEELAPURA	MWS REVIVAL	ಕೆ.ಎಸ್.ನಟರಾಜ್	450000	100000	270114	370114	Work Completed
99.	915	SANHALLI	MWSR	ಎ.ಇ.ಸುರೇಶ್	400000	317955	74045	392000	Work Completed
100	916	SHETTIHALLI	MWSR	ಡಿ.ಬಿ.ಕಂಠಿ	460000	222000	131805	353805	Work Completed
101	918	SRIRAMPURA	MWS REVIVAL	ಎಸ್.ವಿ.ಸೈಯದ್ ಬಾಬು	650000	650000	0	650000	Work Completed
102	923	YADAGHATTA	MWSS AGUMENTATION	ಎಸ್.ದೇವರಾಜ್	310000	280000	0	280000	Work Completed
102		**TOTAL**			**84242000**	**27893487**	**22034030**	**49927517**	

ಕ್ರ ಸಂ.	ಕ್ರಿಯಾ ಯೋಜನೆ ಸಂಖ್ಯೆ	ಕಾಮಗಾರಿಗಳ ವಿವರ	ಯೋಜನೆಯ ಹೆಸರು	ಏಜೆನ್ಸಿ/ ಗುತ್ತಿಗೆದಾರರ ಹೆಸರು	ಅಂದಾಜು ಮೊತ್ತ	2010–11ನೇ ಸಾಲಿಗೆ ಭರಿಸಿದ ವೆಚ್ಚ	2011–12ನೇ ಸಾಲಿನ ವೆಚ್ಚ	ಒಟ್ಟು ವೆಚ್ಚ (ಇಂದಿನ ತನಕ)	ಕಾಮಗಾರಿಯ ಇಂದಿನ ವಾಸ್ತವ ಸ್ಥಿತಿ
1	2	3	4	5	6	7	8	9	10
COVERAGE & QUALITY NEW WORKS									
1.	801	BAGUR	School Water Supply	ಡಿ.ಕುಮಾರಪ್ಪ	100000	0	99709	99709	Work Completed
2.	808	BALLALASAMUDRA	School Water Supply	ಬಿ.ಎಸ್.ವಿಜಯ್‌ಕುಮಾರ್	100000	-	-	-	Under Process
3.	811	SINGINAHALLI	School Water Supply	ಬಿ.ಎಸ್.ಶಿವಲಿಂಗ	100000	-	-	-	Under Process
4.	823	KODIHALLI	PWSS	ಆರ್.ಜಗದೀಶ್	1000000	-	-	-	Under Process
5.	831	BUKKASAGARA	PWSS	ಬಿ.ಎನ್.ಲಕ್ಷ್ಮೀಪತಿ	1000000	-	-	-	Under Process
6.	832	BUKKASAGARA	MWSS	ಬಿ.ಎನ್.ಲಕ್ಷ್ಮೀಪತಿ	1000000	-	-	-	Under Process
7.	842	THUMBINAKERE	School Water Supply	ಡಿ.ಕುಮಾರಪ್ಪ	100000	0	99629	99629	Work Completed
8.	860	MALLENAHALLY (JODI)	School Water Supply	ಬಿ.ಎಸ್.ಶಿವಲಿಂಗಪ್ಪ	100000	-	-	-	Work Completed
9.	871	GORAVI GONDANAHALLY	School Water Supply	ಎಂ.ಹೆಚ್.ಅಂಜಿನಪ್ಪ	100000	0	96425	96425	Work Completed
10.	874	KELLODU	School Water Supply	ಎಂ.ಪರಮೇಶ್ವರ	100000	0	98425	98425	Work Completed
11.	878	LINGADAHALLI	School Water Supply	ಎಂ.ಹೆಚ್.ಅಂಜಿನಪ್ಪ	100000	0	98640	98640	Work Completed
12.	879	MUTHAGONADHI	School Water Supply	ಎಂ.ಹೆಚ್.ಅಂಜಿನಪ್ಪ	100000	0	99992	99992	Work Completed
13.	890	SOMENAHALLI	PIPELINE EXTENSION	ಮಹಮ್ಮದ್ ನಸರುಲ್ಲಾ	600000	0	179714	179714	Under Process
14.	893	LAKKI HALLI	PWSS	ಡಿ.ಜೆ.ಜಯಪ್ರಕಾಶ್	1000000	0		0	Under Process
15.	896	THIMMAIAHNAHATTI	School Water Supply	-	100000	0		0	Dropped
16.	901	MATHODU	PWS REVIVAL	-	2000000	0		0	Estimate tobe Sanctioned
17.	902	MATHODU	PIPELINE EXTENSION	-	1000000	0		0	Tender Process
18.	903	MATHODU	MWSS	-	3000000	0		0	Estimate tobe Sanctioned
19.	906	HARAGONDANAHALLY	School Water Supply	ಬಿ.ಎಸ್.ರಮೇಶ್	100000	0		0	Under Process
20.	907	HARAGONDANAHALLY	PIPELINE EXTENSION	ಎಸ್.ವಿ.ಸೈಯದ್ ಬಾಬು	900000	0	651222	651222	Under Process

ಕ್ರ ಸಂ.	ಕ್ರಿಯಾ ಯೋಜನೆ ಸಂಖ್ಯೆ	ಕಾಮಗಾರಿಗಳ ವಿವರ	ಯೋಜನೆಯ ಹೆಸರು	ಏಜೆನ್ಸಿ/ ಗುತ್ತಿಗೆದಾರರ ಹೆಸರು	ಅಂದಾಜು ಮೊತ್ತ	2010–11ನೇ ಸಾಲಿಗೆ ಭರಿಸಿದ ವೆಚ್ಚ	2011–12ನೇ ಸಾಲಿನ ವೆಚ್ಚ	ಒಟ್ಟು ವೆಚ್ಚ (ಇಂದಿನ ತನಕ)	ಕಾಮಗಾರಿಯ ಇಂದಿನ ವಾಸ್ತವ ಸ್ಥಿತಿ
1	2	3	4	5	6	7	8	9	10
21.	910	S.NERLAKERE	PWS REVIVAL	ಬಿ.ಎನ್..ಲಕ್ಷ್ಮೀಪತಿ	1000000	0		0	Under Process
22.	919	KRISHNAPURA	School Water Supply	ಬಿ.ಎಸ್.ರಮೇಶ್	100000	0		0	Under Process
23.	920	AVALIPALYA	School Water Supply	ಬಿ.ಎಸ್.ರಮೇಶ್	100000	0		0	Under Process
24.	921	THANDGA	PWS REVIVAL	ಬಿ.ಎಸ್.ರಮೇಶ್	1000000	0	52313	52313	Under Process
25.	922	YADAGHATTA	School Water Supply	ಬಿ.ಎಸ್.ರಮೇಶ್	100000	0		0	Under Process
25		**TOTAL**			**14900000**	**0**	**1476069**	**1476069**	
SUSTAINBILITY SPILL OVER WORKS									
1.	813	ARALIHALLI	Sustainibly Scheme	ಎಂ.ಹೆಚ್.ಅಂಜಿನಪ್ಪ	800000	493160	289443	782603	Work Completed
2.	873	KELLODU	Sustainibly Scheme	ಬಿ.ಎಸ್.ವಿಜಯ್‌ಕುಮಾರ್	800000	0	796787	796787	Work Completed
3.	917	SHETTIHALLI	Sustainibly Scheme	ಬಿ.ಎಸ್.ರಮೇಶ್	500000	368794	119265	488059	Work Completed
3.		**TOTAL**			**2100000**	**861954**	**1205495**	**2067449**	
130		**TOTAL**			**101242000**	**28755441**	**24715594**	**53471035**	

Limited to RS: 835.93 Lakhs

ಶ್ರೀ ಗೂಳಿಹಟ್ಟಿ ಡಿ.ಶೇಖರ್:- ಸನ್ಮಾನ್ಯ ಉಪಾಧ್ಯಕ್ಷರೇ, ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಬಹಳಷ್ಟು ಜಾಣ್ಮೆಯಿಂದ ಉತ್ತರವನ್ನು ಕೊಟ್ಟಿದ್ದಾರೆ. ನಮ್ಮ ಚಿತ್ರದುರ್ಗ ಜಿಲ್ಲೆಗೆ ಉದ್ಯೋಗ ಖಾತರಿ ಯೋಜನೆಯಡಿ ಎಷ್ಟು ಅನುದಾನ ನಿಗದಿಪಡಿಸಲಾಗಿದೆ ಎಂದು ನಾವು ಕೇಳಿದಾಗ ರೂ. 126.00 ಕೋಟಿ, ಅದರಲ್ಲಿ ನಮ್ಮ ಹೊಸದುರ್ಗ ತಾಲ್ಲೂಕಿಗೆ, ನನ್ನ ಕ್ಷೇತ್ರಕ್ಕೆ ಎಷ್ಟು ನಿಗದಿಪಡಿಸಲಾಗಿದೆ ಎಂದು ಕೇಳಿದಾಗ ರೂ. 32.40 ಕೋಟಿಗಳು ಎಂಬ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಆದರೆ, ಇದುವರೆವಿಗೂ ನಮ್ಮ ತಾಲ್ಲೂಕಿನಲ್ಲಿ, ಬರಗಾಲದಿಂದ ತತ್ತರಿಸಿರುವಂಥ ತಾಲ್ಲೂಕಿನಲ್ಲಿ, ಬಹಳಷ್ಟು ಉದ್ಯೋಗವನ್ನು ಅರಸಿ ಜನರು ಗುಳೆ ಹೋಗುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಇದುವರೆವಿಗೂ ಖರ್ಚಾಗಿರುವುದು ಬರೀ ರೂ. 37.00 ಲಕ್ಷದಷ್ಟು ಮಾತ್ರ ನಮ್ಮ ತಾಲ್ಲೂಕಿನಲ್ಲಿ ಕಾಮಗಾರಿಗಳಿಗೆ ಖರ್ಚು ಮಾಡಿದ್ದಾರೆ. ರೂ. 32.00 ಕೋಟಿಗಳ ಅನುದಾನವಿದ್ದರೂ ಕೂಡಾ ಉದ್ಯೋಗ ಖಾತರಿ ಕೆಲಸಗಳು ಇದುವರೆವಿಗೂ ಕೂಡಾ ಮಾಡುತ್ತಿಲ್ಲ. ನಮ್ಮ ಚಿತ್ರದುರ್ಗದಲ್ಲಿರುವಂಥ ಸಿ.ಇ.ಓ. ರವರು ಇಲ್ಲದ ರೂಲ್ಸ್ ಮಾಡುತ್ತಾರೆ. ಇಡೀ ರಾಜ್ಯಕ್ಕೆ ಒಂದು ರೂಲ್ಸ್ ಆದರೆ, ನಮ್ಮ ಚಿತ್ರದುರ್ಗಕ್ಕೆ ಒಂದು ರೂಲ್ಸ್, ನಮ್ಮ ಹೊಸದುರ್ಗಕ್ಕೆ ಒಂದು ರೂಲ್ಸ್. ಹಾಗಾಗಿ ಯಾವುದೇ ಕಾಮಗಾರಿಗಳನ್ನು ಇದುವರೆಗೂ ಕೈಗೆತ್ತಿಕೊಳ್ಳುತ್ತಿಲ್ಲ. ಇದು ವರ್ಷದ ಕೊನೆ ಹತ್ತಿರ ಬಂದಿದ್ದರೂ ಕೂಡಾ ರೂ. 37.00 ಲಕ್ಷ ದಷ್ಟು ಮಾತ್ರ ಕೆಲಸ ಆಗುತ್ತಿರುವುದು ಅದರಲ್ಲೂ ರೂ. 37.00 ಲಕ್ಷ ಖರ್ಚಾಗಿರುವುದು ಕೂಡ ಬರೀ ಗಿಡ ನೆಡುವುದು, Horticulture ಮತ್ತು Forest ಇಂಥ ಕೆಲಸಗಳನ್ನು ಬಿಟ್ಟರೆ ಇತರೇ ಯಾವುದೇ ಕಾಮಗಾರಿಗಳ ಕೆಲಸ ಆಗುತ್ತಿಲ್ಲ. ಹೀಗಾಗಿ ಈ ಬಗ್ಗೆ ಮಾನ್ಯ ಸಚಿವರು ಗಮನಹರಿಸಬೇಕು ಮತ್ತು ಸಿ.ಇ.ಓ., ಚಿತ್ರದುರ್ಗರವರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ತಿಪ್ಪೇಸ್ವಾಮಿ:- ಚಿತ್ರದುರ್ಗ ಜಿಲ್ಲೆಯಲ್ಲಿ ಬರ ನಿರ್ಮಾಣವಾಗಿದೆ. ಅದರಲ್ಲೂ ನಮ್ಮ ಚಳ್ಳಕೆರೆ ತಾಲ್ಲೂಕಿನಲ್ಲಿ ರೈತರು ಒಕ್ಕಲುತನ ಮಾಡಲು

ಸಹ ಸಾಧ್ಯವಾಗುತ್ತಿಲ್ಲ. ಇಂಥ ಸಂದರ್ಭದಲ್ಲಿ ಉದ್ಯೋಗ ಖಾತರಿ ಯೋಜನೆಯಾಗಲೀ ಅಥವಾ ನಮ್ಮ ರೂರಲ್ ಡೆವಲಪ್‌ಮೆಂಟ್ ಇಲಾಖೆಯಿಂದಲೂ ಸಹ ಸಾಕಷ್ಟು ಕೆಲಸಗಳು ಆಗುತ್ತಿಲ್ಲ. ಆದ್ದರಿಂದ ಮಾನ್ಯ ಸಚಿವರು ಹೆಚ್ಚಿನ ಗಮನ ಹರಿಸಿ ಏನು ತೊಂದರೆಗೆ ಈಡಾಗಿರುವ ನಮ್ಮ ಜಿಲ್ಲೆಗೆ, ನಮ್ಮ ತಾಲ್ಲೂಕಿಗೆ ಹೆಚ್ಚಿನ ಅನುದಾನವನ್ನು ಕೊಟ್ಟು ಸಹಾಯ ಮಾಡಬೇಕೆಂದು ತಮ್ಮ ಮೂಲಕ ಮಂತ್ರಿಗಳಲ್ಲಿ ನಾನು ವಿನಂತಿ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಗೂಳಿಹಟ್ಟಿ ಶೇಖರ್‌ರವರು ಉದ್ಯೋಗ ಖಾತರಿ ಯೋಜನೆ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಅದರಲ್ಲೂ ಪ್ರಮುಖವಾಗಿ ಚಿತ್ರದುರ್ಗ ಜಿಲ್ಲೆ ಮತ್ತು ತಮ್ಮ ಹೊಸದುರ್ಗ ತಾಲ್ಲೂಕಿಗೆ ಸಂಬಂಧಿಸಿದಂತೆ ಕೇಳಿದ್ದಾರೆ. ಅದರಲ್ಲಿ ಈಗಾಗಲೇ ಅವರೇ ಹೇಳಿದ ಪ್ರಕಾರ ರೂ.32.00 ಕೋಟಿ ನಮ್ಮ ಚಿತ್ರದುರ್ಗ ಹೊಸದುರ್ಗ ತಾಲ್ಲೂಕಿಗೆ ಇದ್ದಂಥದುರಲ್ಲಿ ಇಲ್ಲಿವರೆಗೆ ರೂ.76 ಲಕ್ಷ ಖರ್ಚಾಗಿದೆ. ಖರ್ಚು ಕಡಿಮೆಯಾಗಿದೆ ಎನ್ನುವುದನ್ನು ನಾನು ಒಪ್ಪುತ್ತೇನೆ. ಅವರಿಗೆ allocation ಮಾಡಿರುವುದು. ಆದರೆ ಒಂದು ಈ ಸಂದರ್ಭದಲ್ಲಿ ನಾನು ಇಲ್ಲಿ ಹೇಳಬಯಸುತ್ತೇನೆ. ಈ ಉದ್ಯೋಗ ಖಾತರಿ ಯೋಜನೆ ಯಾರು ಉದ್ಯೋಗವನ್ನು ಕೇಳಿಕೊಂಡು ಬರುತ್ತಾರೋ ಅವರಿಗೆ ಉದ್ಯೋಗ ಕೊಡುವಂಥ ಯೋಜನೆ. ನಾವು ರೂ.125/– ಗಳನ್ನು ದಿನಗೂಲಿ ಕೊಡುತ್ತೇವೆ. ಜನರಲ್ಲಿ ಜಾಗೃತಿ ಮೂಡಿಸುವುದು, ಜನರಿಗೆ ಟಾಂಟಾಂ ಮಾಡಿಸಿ ಹೇಳುವಂಥದ್ದು, ಎಲ್ಲಾ ಮಾಹಿತಿ ಕೊಟ್ಟು ಯಾರು ನಿಜವಾಗಿ ಉದ್ಯೋಗಕ್ಕೆ ಬರುತ್ತಾರೋ ಅವರಿಗೆ ಕೊಡುವಂಥ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಯಾರೂ ಕೇಳದೇ ಬರದೇ ಇರುವಂಥ ಸಂದರ್ಭದಲ್ಲಿ ಸರ್ಕಾರ ಏನೂ ಮಾಡುವುದಕ್ಕಾಗುವುದಿಲ್ಲ. ಆ ಪ್ರಯತ್ನವನ್ನು ಇವತ್ತು ಮಾಡುತ್ತಿದ್ದಾರೆ ಮತ್ತು ಸಿ.ಇ.ಓ ರವರು ನಿರ್ಲಕ್ಷ್ಯ ತಗೊಂಡಿದ್ದಾರೆ, ಹೆಚ್ಚು ಕ್ರಿಯಾಶೀಲರಾಗಿ ಕೆಲಸ ಮಾಡುತ್ತಿಲ್ಲ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಅದರ ಬಗ್ಗೆ ನಾನು ಗಮನ ಹರಿಸುತ್ತೇನೆ.

ಯಾವ ರೀತಿ ಉದ್ಯೋಗ ಖಾತರಿ ಯೋಜನೆ ಅನುಷ್ಠಾನ ಮಾಡಿದೆ, ಎಲ್ಲಿ ಕುಂದುಕೊರತೆ ಇದೆ, ಎಲ್ಲಿ ಲೋಪದೋಷಗಳಿವೆ ಅದನ್ನು ಸರಿ ಮಾಡುವಂಥ ಕೆಲಸ ಮಾಡುತ್ತೇವೆ. ಇನ್ನು ಹೆಚ್ಚು ತೀವ್ರಗತಿಯಿಂದ ಅನುಷ್ಠಾನ ಮಾಡುವಂಥದ್ದು ಮತ್ತು ಯಾರು ಉದ್ಯೋಗ ಕೇಳಿಕೊಂಡು ಬರುತ್ತಾರೋ ಅವರಿಗೆ ಯಾವುದೇ ಸಂದರ್ಭದಲ್ಲೂ ಉದ್ಯೋಗ ಇಲ್ಲ ಎನ್ನುವಂಥದ್ದು ಅಲ್ಲ. ಅದನ್ನು ಮಾಡುವಂಥ ಕೆಲಸವನ್ನು ನಾವು ಮಾಡಿದ್ದೇವೆ. ಹೀಗಾಗಿ ಇನ್ನು ಹೆಚ್ಚು ನಮ್ಮ ಚಳ್ಳಕೆರೆ ಶಾಸಕರು ಸಹ ಇದಕ್ಕೆ ಧ್ವನಿಗೋಡಿಸಿದ್ದಾರೆ. ಮತ್ತು ಯೋಜನೆಯು ಸಹ ಆದಷ್ಟು ಬೇಗನೆ ಅನುಷ್ಠಾನ ಆಗಬೇಕು ಎನ್ನುವುದನ್ನು ಸಹ ಅವರು ಹೇಳಿದ್ದಾರೆ. ಅದಕ್ಕೂ ಕೂಡಾ ನಾನು ಹೆಚ್ಚಿನ ಗಮನಹರಿಸುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ:- ಮಾನ್ಯ ಉಪಾಧ್ಯಕ್ಷರೇ, ಇದು ಹೊಸದುರ್ಗಕ್ಕೆ ಸೀಮಿತವಾದ ಪ್ರಶ್ನೆಯಾದರೂ ಕೂಡಾ ತಾವು ಕೊಟ್ಟಿರುವ ಉತ್ತರ ರಾಜ್ಯಕ್ಕೆ ಸಂಬಂಧಿಸಿದ ಉತ್ತರ ಕೊಟ್ಟಿದ್ದೀರಿ. ದಯಮಾಡಿ ಕಳೆದ 2 ವರ್ಷದಲ್ಲಿ 2007-08, 2008-09ರಲ್ಲಿ ಎಷ್ಟು ಹಣ ಖರ್ಚು ಆಯಿತು? ಎಷ್ಟು ಜನಕ್ಕೆ ಉದ್ಯೋಗ ಕೊಡುವುದಕ್ಕಾಯಿತು? ಈ ವರ್ಷದಲ್ಲಿ ಏಕೆ ಸ್ಥಗಿತವಾಗಿದೆ? ರೂ.36.00 ಕೋಟಿ, ರೂ. 76.00 ಲಕ್ಷ ಎಂದು ಹೇಳಿದರೆ ಲೋಪದೋಷಗಳು ಎಲ್ಲಿದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಿ, ಬರ ಇದೆ, ಉದ್ಯೋಗ ಇಲ್ಲ, ಗುಳೆ ಹೋಗುತ್ತಿದ್ದಾರೆ, ಪತ್ರಿಕೆಯಲ್ಲಿ ಬರುತ್ತಿದೆ. ಆದರೂ ಕೂಡಾ ಖರ್ಚಾಗುತ್ತಿಲ್ಲವೆಂದರೆ ಲೋಪದೋಷವಿರುವುದು ನಮ್ಮ ಯೋಜನೆಯಲ್ಲಿ, ಅದರಲ್ಲಿ ಮಾರ್ಪಾಡು ಮಾಡುವ ಕೆಲಸವನ್ನು ಮಾಡಿದರೆ ಮಾತ್ರ ನೀವು ಬರಗಾಲಕ್ಕೆ ತುತ್ತಾಗಿರುವಂಥ ಪ್ರದೇಶಗಳಿಗೆ ಸಹಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆ, ಇಲ್ಲದಿದ್ದರೆ ಆಗುವುದಿಲ್ಲ. ಕಾಮಗಾರಿ ನಡೆಯುವ ಸಂದರ್ಭದಲ್ಲಿ ವಿಡಿಯೋ ಮಾಡಿ ಎಂದು ನೀವು ಹೇಳುತ್ತೀರಿ. ವಿಡಿಯೋ ಮಾಡುವುದು ಹೇಗೆ ಸಾಧ್ಯವಾಗುತ್ತದೆ? ಇದೆಲ್ಲಾ impracticable ಆಗಿರುವಂಥ ರೀತಿಯಲ್ಲಿ conditions ಹಾಕಿ ಅಧಿಕಾರಿಗಳು ಇವತ್ತು ಯಾರೂ ಬರುತ್ತಿಲ್ಲ. ಪಿ.ಡಿ.ಓ.ಗಳನ್ನು ಹಾಕಿದ್ದೀರಿ,

ಸಾಕಷ್ಟು ಕೆಲಸ ಮಾಡಿದ್ದೀರಿ. ಆದರೆ ಒಬ್ಬ ಪಿ.ಡಿ.ಓ ಕೂಡಾ ಧೈರ್ಯವಾಗಿ ಕೆಲಸ ಮಾಡುವುದಕ್ಕೆ ಮುಂದೆ ಬರುತ್ತಿಲ್ಲ. ನಮಗೇನಾಗಬೇಕು? ನಮಗೆ ಬರುವುದಿಲ್ಲ. ಈ conditions ಪ್ರಕಾರ ಇದ್ದರೆ ಮಾಡಿ ಇಲ್ಲದಿದ್ದರೆ ಹೋಗಿ ಎನ್ನುವಷ್ಟರ ಮಟ್ಟಿಗೆ ಆಗಿದೆ. ದಯಮಾಡಿ ಇದನ್ನು ತಾವು ಉತ್ತರದಲ್ಲಿ ಹೇಳುವಷ್ಟು ಸುಲಭವಾಗಿಲ್ಲ. ಅಧಿಕಾರಿಗಳ ಜೊತೆ ಕುಳಿತು ಚರ್ಚೆ ಮಾಡಿ ಇದಕ್ಕೆ ಏನಾದರೂ ಮಾಡಿ. ಸ್ವಲ್ಪಮಟ್ಟಿಗೆ ಮಾರ್ಪಾಟು ಮಾಡಿದರೆ ಸಾಧ್ಯವಾಗುತ್ತದೆ. ಇನ್ನು ಇರುವುದೇ 65 ದಿವಸ ಮಾತ್ರ. ಮಾರ್ಚಿಗೆ ಇನ್ನು 65 ದಿವಸವೇ ಇರುವುದು. ಈಗ ನೀವು ಉದ್ಯೋಗ ಕೊಡಬೇಕಾಗಿರುವಂಥದ್ದು, ಇದನ್ನು ಬಿಟ್ಟು ಈ ರೀತಿಯ ಉತ್ತರದಿಂದ ಖಂಡಿತ ಸಮಾಧಾನ ಆಗುವುದಿಲ್ಲ. ದಯಮಾಡಿ ಕರೆದು ಚರ್ಚೆ ಮಾಡುವಂಥ ಕೆಲಸವನ್ನು ಮಾಡಿ.

ಶ್ರೀ ಗೂಳಿಹಟ್ಟಿ ಡಿ. ಶೇಖರ್:– ಮಾನ್ಯ ಉಪಾಧ್ಯಕ್ಷರೇ, ಕಳೆದ ವರ್ಷ ರೂ.29.00 ಕೋಟಿ ಅನುದಾನ ನಮ್ಮ ತಾಲ್ಲೂಕಿಗೆ ಇಟ್ಟಿದ್ದರ ಪೈಕಿ ಅದರಲ್ಲಿ ಸುಮಾರು ರೂ.16.00 ಕೋಟಿ ಖರ್ಚಾಗಿದೆ. ಈ ವರ್ಷ ರೂ.36.00 ಕೋಟಿ ಇಟ್ಟಿದ್ದರೆ, ಇದುವರೆವಿಗೂ ನಮಗೆ ಗೊತ್ತಿರುವುದು ರೂ.37.00 ಲಕ್ಷ. ನಮ್ಮ ಸಚಿವರು ಹೇಳುತ್ತಿರುವುದು ರೂ. 70.00 ಲಕ್ಷ, ಅಲ್ಲಿಗೆ variation ಎಷ್ಟಿದೆ? ಇನ್ನು 60 ದಿವಸಗಳಿದೆ, ಎಷ್ಟು ಖರ್ಚು ಮಾಡುವುದಕ್ಕಾಗುತ್ತದೆ? ನಿಜವಾಗಿಯೂ ಕೂಡಾ ಇಡೀ ರಾಜ್ಯದಲ್ಲಿ ಯಾವ ರೀತಿ ಉದ್ಯೋಗ ಖಾತರಿ ನಡೆಸುತ್ತಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಯಾವ ರೀತಿ ಕಾಮಗಾರಿಗಳು ಆಗುತ್ತಿವೆ ಎಂದು. ಜನ ಗುಳೆ ಹೋಗುತ್ತಿದ್ದಾರೆ. ಪಕ್ಕದ ನಮ್ಮ ಚಿಕ್ಕಮಗಳೂರಿನಲ್ಲಿರುವ ಸಿ.ಇ.ಓ. ಇರಬಹುದು, ಅವರೇ ನಮ್ಮಲ್ಲಿ ಕಳೆದ ವರ್ಷ ಇದ್ದರು. ಅವರು ಎಷ್ಟು ಖರ್ಚು ಮಾಡಿದರು, ಈಗಿರುವಂಥ ಸಿ.ಇ.ಓ. ಇಲ್ಲದ ಕಾನೂನು ಮಾಡಿ, ವಿಡಿಯೋ ಮಾಡಿ, ಲೇಬರ್ಸ್‌ಗಳೇ ಬಂದು ಮಾಡಬೇಕು ಎನ್ನುವಂಥ ಇಲ್ಲದ ಕಾನೂನನ್ನು ಮಾಡಿದ್ದಾರೆ. ಇಡೀ ರಾಜ್ಯಕ್ಕೆ ಒಂದು ಕಾನೂನಾದರೆ ನಮ್ಮ ಕ್ಷೇತ್ರಕ್ಕೆ ಒಂದು ಕಾನೂನಿದೆ. ಹಾಗಾಗಿ ಬರಿ ರೂ.36.00 ಲಕ್ಷ

ನಮ್ಮಲ್ಲಿ ಖರ್ಚಾಗಿರುವುದು. ಅದು ಬರಿ ಗಿಡ ಹಾಕುವುದರಲ್ಲಿ ಮಾತ್ರ. ಮೊದಲೇ ಬರಗಾಲದಿಂದ ತುತ್ತಾಗುತ್ತಿವೆ, ಗುಳೆ ಹೋಗುತ್ತಿದ್ದಾರೆ. ಬೇರೆ ಅನುದಾನ ಯಾವುದನ್ನೂ ಕೂಡಾ ಕೊಟ್ಟಿಲ್ಲ. ಉದ್ಯೋಗಕ್ಕೆ ಇರುವಂಥ ಉದ್ಯೋಗ ಖಾತರಿಯಲ್ಲೂ ಕೂಡಾ ಸಮರ್ಪಕವಾಗಿ ಕೆಲಸ ಮಾಡಿಲ್ಲವೆಂದರೆ ಅಂಥವನ್ನು ನೋಡಿಕೊಂಡು ನಾವು ಅಲ್ಲಿ ಆ ಕ್ಷೇತ್ರದಲ್ಲಿ ಇರುವುದಕ್ಕಾದರೂ ಆಗುತ್ತದೆಯೇ? ಉದ್ಯೋಗ ಖಾತರಿ ಅಡಿಯಲ್ಲಿ ಕೆಲಸ ಕೊಡುವುದಕ್ಕೆ ಆಗುತ್ತಿಲ್ಲ. ಅಂಥ ಬೇಜವಾಬ್ದಾರಿ ಅಧಿಕಾರಿಗಳನ್ನು ಜಿಲ್ಲಾ ಮಟ್ಟದಲ್ಲಿ ಇಟ್ಟುಕೊಂಡಿದ್ದಾರೆ. ಇದು ನಿಜಕ್ಕೂ ನಮ್ಮ ಕ್ಷೇತ್ರಕ್ಕೆ ಆಗುತ್ತಿರುವ ಅನ್ಯಾಯ. ಇದನ್ನು ಸರಿಪಡಿಸಬೇಕು. ಅಂಥ ಅಧಿಕಾರಿಗಳಿದ್ದರೆ ಯಾವುದೋ ಒಂದು ಕಂಪ್ಯೂಟರ್ ರೂಮಿನಲ್ಲಿ ಕೂರಿಸಿ, ರಾಜ್ಯದಲ್ಲಿ ಒಳ್ಳೆ ಸ್ಥಾನ ಕೊಟ್ಟರೆ ಅವರಿಂದ ಬಹಳಷ್ಟು ಕೆಲಸ ಮಾಡುವುದಕ್ಕೆ ಅವಕಾಶವಾಗುತ್ತದೆ. ಹಾಗಾಗಿ ದಯಮಾಡಿ ಇದರ ಬಗ್ಗೆ ಉತ್ತರ ಕೊಡುವುದಷ್ಟೇ ಅಲ್ಲ ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಇದೊಂದೇ ಅಂಥ ಅಲ್ಲ. ಉದ್ಯೋಗ ಖಾತರಿ ಒಂದೇ ಅಲ್ಲ, ಕುಡಿಯುವ ನೀರನ್ನು ಸಹ ಸಮರ್ಥವಾಗಿ ನಮ್ಮ ತಾಲ್ಲೂಕಿನಲ್ಲಿ ಮಾಡುತ್ತಿಲ್ಲ. ಈಗಿನ ಚಿತ್ರದುರ್ಗ ಸಿ.ಇ.ಓ ಯಾರಿದ್ದಾರೆ, ಅವರ ಬಗ್ಗೆ ವೈಯುಕ್ತಿಕವಾಗಿ ಟೀಕೆ ಮಾಡುವುದಲ್ಲ. ಹಿಂದೆ ಇರುವಂಥ ಹಲವಾರು ಸಿ.ಇ.ಓ.ಗಳು ಕೆಲಸ ಮಾಡಿಕೊಂಡು ಹೋಗಿದ್ದಾರೆ. ಸಾಕಷ್ಟು ಅನುದಾನ ಖರ್ಚು ಮಾಡಿದ್ದಾರೆ. ಹಾಗಾಗಿ ಈ ಸಿ.ಇ.ಓ. ವಿ.ಐ.ಪಿ. ರೀತಿಯಲ್ಲಿ ವರ್ತಿಸುತ್ತಾರೆ. ಇಲ್ಲದ ಕಾನೂನುಗಳನ್ನಿಟ್ಟು ಕುಡಿಯುವ ನೀರಿಗೂ ಸಮಸ್ಯೆ ಮಾಡುತ್ತಿದ್ದಾರೆ. ಯಾವುದನ್ನೂ ಕೂಡಾ ಅನುಷ್ಠಾನ ಮಾಡುತ್ತಿಲ್ಲ. ಉದ್ಯೋಗ ಖಾತರಿ ಅನುಷ್ಠಾನ ಮಾಡುತ್ತಿಲ್ಲ. ದಯವಿಟ್ಟು ಈ ಬಗ್ಗೆ ಮಾನ್ಯ ಸಚಿವರು ಗಂಭೀರವಾಗಿ ಪರಿಗಣಿಸಬೇಕು. ಹಾಗಾಗಿ ಹೆಚ್ಚಿನ ಕೆಲಸವನ್ನು ದಯಮಾಡಿ ಸರ್ಕಾರದಿಂದ ನಾವು ನಿರೀಕ್ಷೆ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಗೂಳಿಹಟ್ಟಿ ಶೇಖರ್ ಮತ್ತು ಜಯಚಂದ್ರ ರವರು ಹಲವಾರು ವಿಚಾರಗಳನ್ನು ಹೇಳಿದರು. ಇಡೀ

ರಾಜ್ಯದ ಬಗ್ಗೆ ನಾನು ಹೇಳಬೇಕಾದರೆ ಇಲ್ಲಿಯವರೆಗೆ 1243 ಕೋಟಿ ಖರ್ಚು ಮಾಡಿದ್ದೇವೆ. ನಮಗೆ ಇಲ್ಲಿಯವರೆಗೆ ಹಣ ಬಿಡುಗಡೆಯಾಗಿದ್ದು 1861 ಕೋಟಿ, ಅದರಲ್ಲಿ 1243 ಕೋಟಿ ರೂ.ಗಳನ್ನು ನಾವು ಖರ್ಚು ಮಾಡಿದ್ದೇವೆ. ತಾವು videography ಬಗ್ಗೆ ಹೇಳಿದಿರಿ. ಮೊದಲು restriction ಹಾಕಿರಲಿಲ್ಲ. ಆದರೆ mis-appropriation ಆಗುತ್ತಿತ್ತು, ಕೆಲಸ ಮಾಡದೇ entry ಮಾಡುತ್ತಿದ್ದರು. ಕಾಮಗಾರಿ ಆಗಿದೆ ಎಂದು ತೋರಿಸುತ್ತಿದ್ದರು. ಅವರು–ಇವರು ಶಾಮೀಲಾಗಿದ್ದಾರೆಂದು ಬಹಳಷ್ಟು complaints ಬರಲು ಪ್ರಾರಂಭವಾದುವು. ಅಲ್ಲಿ field ನಲ್ಲಿ ಕೆಲಸವೇ ಆಗುತ್ತಿರಲಿಲ್ಲ. ಕೆಲಸ ಮಾಡಿದರೆ ಅಡ್ಡಿ ಇಲ್ಲ. ಅದೂ ಇಲ್ಲ. Continuous ಆಗಿ ಕೆಲಸ ಮಾಡುವಾಗ videograph ಮಾಡುವುದಿಲ್ಲ. ಕೆಲಸ ಪ್ರಾರಂಭವಾದಾಗ, ಮಧ್ಯದಲ್ಲಿ ಒಂದು ಸಲ ಮತ್ತು ನಂತರದಲ್ಲಿ ಒಂದು ಸಲ ಹೀಗೆ 2–3 ಸಲ ಮಾಡುತ್ತೇವೆ. Very small workಗೆ 5 ಲಕ್ಷ ರೂ.ಒಳಗಿದ್ದರೆ restriction ಹಾಕುವುದಿಲ್ಲ. ಇದರಲ್ಲಿ ಕೇಂದ್ರ ಸರ್ಕಾರದ guidelines ಇದೆ. 100% implement ಮಾಡಿದಾಗ ಏನು ಪರಿಣಾಮವಾಗುತ್ತದೆಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇದರ ಬಗ್ಗೆ 2009–10ನೇ ಸಾಲಿನಲ್ಲಿ misappropriation ಬಗ್ಗೆ complaints ಬಹಳ ಬಂದ ಮೇಲೆ ಆ ಬಗ್ಗೆ enquiry ಇವತ್ತಿಗೂ ನಡೆಯುತ್ತಿದೆ. ಕೆಲವು ಕಡೆ payment ಮಾಡಲು ಆಗಿಲ್ಲ. ಗುಲ್ಬರ್ಗಾ ಮತ್ತು ತುಮಕೂರು ಜಿಲ್ಲೆಗಳಿಗೆ ಕೇಂದ್ರ ಸರ್ಕಾರದ team ಬಂದು misappropriation ಆಗುತ್ತಿರುವ ಬಗ್ಗೆ inspection ಮಾಡಿದರು. ಅದಾದ ಮೇಲೆ restriction ಹಾಕಿದೆವು. ಇಂತಹ ಸಮಸ್ಯೆಗಳಿರುವುದರಿಂದ ಈ ಬಾರಿ guidelines change ಮಾಡಿ restriction ಹಾಕಿದ್ದರೂ ಸಹ 1243 ಕೋಟಿ ಖರ್ಚು ಮಾಡಿದ್ದೇವೆ. ಆದುದರಿಂದ ಗೂಳಿಹಟ್ಟಿ ಶೇಖರ್ ರವರು ತಮ್ಮ ತಾಲ್ಲೂಕಿನಲ್ಲಿ ಕಡಿಮೆ ಖರ್ಚಾಗಿದೆ, genuine ಆಗಿ ಉದ್ಯೋಗ ಕೇಳಿ ಬರುವವರಿಗೆ ಅವಕಾಶವಿಲ್ಲವೆಂದು ಹೇಳುತ್ತಿದ್ದು, ಇವೆಲ್ಲದರ ಕುರಿತು ಕೂಲಕಷವಾಗಿ ತನಿಖೆಯನ್ನು ಮಾಡಿಸುತ್ತೇನೆ. ಸಿ.ಇ.ಓ. ರವರ ಬಗ್ಗೆ

ಹೇಳಿದ್ದು, ಅವರ ಕಾರ್ಯಕ್ಷಮತೆಯ ಬಗ್ಗೆ ಪೂರ್ತಿ ವಿಚಾರ ಮಾಡಿ ಅಗತ್ಯ ಕ್ರಮ ಕೈಗೊಳ್ಳುತ್ತೇನೆ.

ಶ್ರೀರಂಗಪಟ್ಟಣದಲ್ಲಿ ಪ್ರಥಮದರ್ಜೆ ಕಾಲೇಜುಗಳಿಗೆ ಮೂಲ ಸೌಲಭ್ಯ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 25 (242)
ಸದಸ್ಯರ ಹೆಸರು : ಶ್ರೀ ರಮೇಶ ಬಂಡಿಸಿದ್ದೇಗೌಡ ಎ.ಬಿ. (ಶ್ರೀರಂಗಪಟ್ಟಣ)
ಉತ್ತರಿಸುವ ಸಚಿವರು : ಡಾ॥ ವಿ.ಎಸ್.ಆಚಾರ್ಯ (ಮಾನ್ಯ ಉನ್ನತ ಶಿಕ್ಷಣ ಸಚಿವರು)

ಪ್ರಶ್ನೆಗಳು:

ಅ) ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿರುವ ಪ್ರಥಮದರ್ಜೆ ಕಾಲೇಜಿನಲ್ಲಿ ಕಟ್ಟಡದ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕಟ್ಟಡ ನಿರ್ಮಾಣಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಇಲ್ಲವಾದಲ್ಲಿ ಕಾರಣಗಳೇನು;

ಆ) ಸದರಿ ಪ್ರಥಮದರ್ಜೆ ಕಾಲೇಜು ಪ್ರಾರಂಭವಾದಾಗಿನಿಂದ ಈವರೆವಿಗೂ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ವಿವರ ಒದಗಿಸುವುದು);

ಇ) ಶ್ರೀರಂಗಪಟ್ಟಣ ಪ್ರಥಮದರ್ಜೆ ಕಾಲೇಜಿನಲ್ಲಿ ಬೋಧಿಸಲಾಗುತ್ತಿರುವ ವಿಷಯಗಳೆಷ್ಟು;

ಈ) ಶ್ರೀರಂಗಪಟ್ಟಣ ಪ್ರಥಮದರ್ಜೆ ಕೇಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಕೊಠಡಿಗಳ (ಲ್ಯಾಬ್) ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಉ) ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿರುವ ಪ್ರಥಮದರ್ಜೆ ಕಾಲೇಜಿನಲ್ಲಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಸಂಖ್ಯೆ ಎಷ್ಟು? (ವಿವರ ನೀಡುವುದು); ಉಪನ್ಯಾಸಕರ ಹಾಗೂ ಸಿಬ್ಬಂದಿಗಳ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡಿರುವ